ಆದರೆ, ಯಾರು ಉಣಬೇಕು ಮೊದಲು ಅನ್ನೋದೇ ಈಗಿನ ಪ್ರಶ್ನೆ. ಎಲ್ಲರ ಮೇಲೆ ಎಲ್ಲರಿಗೂ ಅಪನಂಬಿಕೆ. ಅಲ್ಲಿಗೇ ಎಲ್ಲರಿಗೆ ಮೀರಿತ್ತು. ನೀನೇ ಮೊದಲು ಉಣು ಅಂದಿದ್ದೇ ನೆಪವಾಗಿ ಇರುವ ನಾಲ್ಕು ಜನರಲ್ಲಿ ಎರಡು ಗುಂಪುಗಳಾದಾಗ ಈ ತಗುವು ಮುಗಿಯೋದು ಹೇಗೆ? ಇದನ್ನು ಬಗೆಹರಿಸಲು ಈ ಅಡವಿಯಲ್ಲಿ, ಈ ಅಪರಾತ್ರಿಯಲ್ಲಿ ನಮ್ಮ ಪಾಲಿಗೆ ಆ ದೇವರೇ ಬರಬೇಕಿನ್ನು ಅಂತ ಸ್ವಗತದಲ್ಲಿ ಆಲೋಚಿಸುತ್ತ ಕುಂತವನೊಬ್ಬ ಆವೇಶದಲ್ಲಿ–

"ಆ ಮ್ಯಾಲಿನವನೇ ಬರಬೇಕಿನ್ನ, ಬ್ಯಾರೆ ದಾರೇ ಇಲ್ಲ" ಅಂದು ಆಕಾಶದ ಕಡೆ ಕೈ ಮಾಡಿದ.

ಅವನ ಧ್ವನಿಯಲ್ಲಿ ಹತಾಶೆ, ಕಟ್ಟಿಕೊಂಡಿದ್ದ ನಂಬಿಕೆಯ ಆವರಣವೊಂದು ಕಣ್ಮುಂದೆಯೇ ಕುಸಿದುಹೋದಂಥ ವಿಚಿತ್ರ ನೋವು, ಇದು ಹೀಗೇ ಮುಂದುವರಿದು ಬೆಳಕಾದರೆ ತಮ್ಮ ಸಾಮೂಹಿಕ ಶ್ರಮವೆಲ್ಲ ಮಣ್ಣುಪಾಲಾಗಬಹುದೆಂಬ ಆತಂಕ, ಎಷ್ಟು ಚಂದ ಇದ್ದವರು ಇದ್ದಕ್ಕಿದ್ದಂಗೆ ಹೀಗಾಗಿಬಿಟ್ಟೆವಲ್ಲ ಎಂಬ ಬೇಸರ, ಥೇ ಎಂಬ ಸ್ವಮರುಕ, ದೇವರು ಕ್ಷಣದ ಮಟ್ಟಿಗಾದರೂ ಬಂದು ಇದನ್ನು ಬಗೆಹರಿಸಿಹೋಗಬಾರದೇ ಎಂಬ ಆರ್ತ ಯಾಚಕ ಭಾವಗಳು ತುಂಬಿ ತುಳುಕುತ್ತಿದ್ದವು.

ಅವನ ಕೈ ಆಕಾಶದ ಕಡೆಗಿದ್ದರೂ ಅದು ಕಾಕತಾಳೀಯವಾಗಿ ನನ್ನತ್ತಲೇ ತೋರಿದಂತಿತ್ತು. ಇಲ್ಲಿಗೆ ಬಂದ ಉದ್ದೇಶವನ್ನೇ ಮರೆತವನಂತೆ ತುಸುಹೊತ್ತು ಈ ವಿಚಿತ್ರ ನಾಟಕದಲ್ಲಿ ಬೆರೆತು ಒಂದಾಗಿಬಿಟ್ಟಿದ್ದೆ. ಅವನ ಕೈ ನನ್ನತ್ತಲೂ ಇರುವುದನ್ನು ಕಂಡವನೇ ಅವನಿಗಿಂತ ಹೆಚ್ಚು ಆವೇಶಕ್ಕೊಳಗಾಗಿ, ಬಯಲಾಟದಲ್ಲಿ ಮರೆತ ಮಾತನ್ನು ಕಥಾಸಂಚಾಲಕನು ಆಪದ್ಬಾಂಧವನಂತೆ ಎತ್ತಿಕೊಟ್ಟಾಗ ಸಟ್ಟನೆ ಹಿಡಿದುಕೊಂಡು ಅದರ ಆಸರೆಯಲ್ಲಿ ಮುಂದಿನ ಮಾತುಗಳನ್ನು ಹೇಳಲು ಉತ್ಸುಕನಾಗುವ ಹೊಸನಟನ ಹುಮ್ಮಸ್ಸಿನಲ್ಲಿ, ಯಾವುದೋ ಮಾಯೆಯ ಸೆಳೆತಕ್ಕೊಳಗಾದವನಂತೆ ನಾನು–

"ಸಾಧ್ಯ ಇಲ್ಲಂದೆ. ನಾನು ಮಾತ್ರ ಸತ್ರೂ ಉಣಂಗಿಲ್ಲ" ಅಂದುಬಿಟ್ಟೆ.

ಈಗ ಆಕಾಶವಾಣಿ ಬಂದ ದಿಕ್ಕಿಗೆ ಎಲ್ಲರೂ ಗೋಣೆತ್ತಿ ನೋಡಿದರು. ತಕ್ಷಣ ತಂಡದ ಹಿರಿಯ–

"ಲೇಯ್... ಮೊದ್ಲು ಆ ಮಗನ್ನ ಕೆಳಗಿಳಿಸ್ರಲೇ. ಅವನು ಉಂಡು ಬದುಕಿದ ಮ್ಯಾಲೇ ಇವತ್ತು ನಮ್ಮ ಊಟ" ಅಂತ ಫರ್ಮಾನು ಹೊರಡಿಸೇಬಿಟ್ಟ. ತಕ್ಷಣ ಮೂವರು ಮಾವಿನ ಮರದ ಸುತ್ತ ಘೇರಾಯಿಸಿಕೊಂಡು ನನ್ನತ್ತ ಬಂದೂಕನ್ನು ಗುರಿ ಮಾಡಿಟ್ಟರು.

ನಾಯಿಕುನ್ನಿಯಂತೆ ಕುಂಯ್‌ಗುಟ್ಟುತ್ತ ಕೆಳಗಿಳಿದೆ.

ಅಷ್ಟರಲ್ಲಿ ಹಿರಿಯನು ಎಲ್ಲರ ಪಾಲಿನ ಹುಗ್ಗಿಯಿಂದ ಒಂದೊಂದು ದೊಡ್ಡ ತುತ್ತು ತೆಗೆದು ಹೊಸದೊಂದು ಪಾಲು ರೆಡಿ ಮಾಡಿದ. ಅಮ್ಮ ಹೀಗೇ ಅನ್ನ ಗಟ್ಟಿಬ್ಯಾಳೆ ಕಲಿಸಿ ಪಾಲು ಹಾಕುತ್ತಿದ್ದಳು. ಆ ನೆನಪು ಆರ್ದ್ರಗೊಳಿಸಿದ ಫಲವಾಗಿ ಕಣ್ಣು ಹನಿಗೂಡಿದವು. ಮಧ್ಯಾಹ್ನ ಅನ್ನ ಉಣ್ಣದೆ ಅರ್ಧಕ್ಕೇ ಎದ್ದಾಗ ಅಮ್ಮ ಬೇಸರಿಸಿಕೊಂಡಿದ್ದೂ ನೆನಪಾಯಿತು. ಹಿಂದೆಯೇ ಸೈಕಲ್ ತಾತನ ನೆನಪು. ಆತನ ಮೇಲೆ ಉಕ್ಕಿ ಪುಟಿಯುತ್ತಿದ್ದ ನನ್ನ ಜಿದ್ದಿನ ನೆನಪು. ಅಯ್ಯೋ ಆ ಜಿದ್ದಿಗೆ ಇದೆಂಥಾ ಅಚಾತುರ್ಯ ಮಾಡಿಕೊಂಡುಬಿಟ್ಟೆ.

ಪ್ರಜ್ಞೆ ಮರಳಿದವನಂತೆ, ಕೊನೇ ಪ್ರಯತ್ನವಾಗಿ ಉಣ್ಣಲ್ಲ ಎಂಬಂತೆ ಗೋಣು ಅಡ್ಡಡ್ಡ ಆಡಿಸಿದೆ.

ನನ್ನೀ ಮೊಂಡು ಹಟದಿಂದ ಸಿಟ್ಟಿಗೆದ್ದ ಒಬ್ಬ ಬಂದೂಕಿನ ಬುಡದಿಂದ ಬೆನ್ನಿಗೆ ಗುದ್ದಿದರೆ ಸೀದಾ ಬಂದುಬಿದ್ದದ್ದು ಹುಗ್ಗಿಯ ಮುಂದೇ! 'ಉಣ್ಣಲಿಕ್ಕೆ ಸಾಯಿಸಿಬಿಡ್ತೀವಿ ಸೂಳೆಮಗನೇ' ಅಂದ್ರು ಎಲ್ಲ ಸೇರಿ ಒಮ್ಮೆಗೆ. ಗುದ್ದಿದ ರಭಸಕ್ಕೆ ಬೆನ್ನು ಚುರುಗುಟ್ಟುತ್ತಿತ್ತು. ಹುಗ್ಗಿಯನ್ನು ನೋಡಿ ದುಃಖ ಒತ್ತರಿಸಿಕೊಂಡು ಬಂತು. ಸಣ್ಣ ಹುಡುಗನಂತೆ ಹೋ ಎಂದು ಅಳತೊಡಗಿದೆ.

ಎದುರಿಗಿದ್ದವ ಕೈ ಸಡೆ ಬಿಟ್ಟು ಕಿವಿ ಗುಂಯ್‌ಗುಟ್ಟುವಂತೆ ಕಪಾಳಕ್ಕೆ ಒಂದು ಬಿಗತಾ ಬಿಗದು,